ಗಳನ್ನು ತಾವು ಹಾಕಬೇಕು. ಇಂತಹ ಸ್ಥಿತಿಯಲ್ಲಿ ಈ ವರ್ಷ ನೀರನ್ನು ಕೊಡುವುದಿಲ್ಲವೆನ್ನುವುದು ಸರಿಯಲ್ಲವೆಂದು, ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ದಯಮಾಡಿ, ಈ ವರ್ಷ ಹಣ ಬಿಡುಗಡೆ ಮಾಡಿ, ನೀರಿನ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಗೋಳು ನನಗೆ ಅರ್ಥವಾಗುವುದಿಲ್ಲವೆಂದು ಹೇಳಿದ್ದಾರೆ. ಅವರು ಬೇತನೂರು ಜನರ ಗೋಳು ಹೊತ್ತರೆ, ೨೪೨ ಪಟ್ಟಣಗಳ ಜನರ ಗೋಳನ್ನು ಹೊತ್ತುಕೊಂಡು ನಾನು ತಿರುಗಬೇಕಾಗಿದೆ, ಈಗ ಬರಗಾಲ ಪರಿಹಾರದ ಅಂಗವಾಗಿ ಚಿಕ್ಕಮಗಳೂರು ಜಿಲ್ಲೆಗೆ ೭ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಜಿಲ್ಲಾಮಟ್ಟದ ಸಭೆಯಲ್ಲಿ ಮಾನ್ಯ ಸದಸ್ಯರು, ಕೊಳವೆ ಭಾವಿಗಳನ್ನು ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು.

ಅಧಿಸೂಚಿತ ಪ್ರದೇಶ ಸಮಿತಿಯ ರಚನೆ

೨೦೦೪. ಶ್ರಿ ಬಿ. ಬಿ. ನಿಂಗಯ್ಯ.—ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುದುರೆ ಮುಖದಲ್ಲಿ '' ಅಧಿಸೂಚಿತ ಪ್ರದೇಶ ಸಮಿತಿ '' ಯೊಂದಿದ್ದು ಅದರ ರಚನೆಯಾಗಿರುವುದು ನಿಜವೇ ?

ಆ) ಹಾಗಾದರೆ, ಈ ಸಮಿತಿಯ ರಚನೆಯಾಗಿ ಎಷ್ಟು ಕಾಲವಾಗಿದೆ, ಅದರ ಅಧ್ಯಕ್ಷರು ಮತ್ತು ಸದಸ್ಯರುಗಳಾವರು, ಆ ಸಮಿತಿಯಲ್ಲಿ ಕಾರ್ಮಿಕರಿಗೆ (ಸದಸ್ಯರನ್ನಾಗಿ) ಅವಕಾಶ ಕೊಡಲಾಗಿದೆಯೇ,

ಇ) ಈ ಸಮಿತಿಯು ಈವರೆಗೆ ಎಂದೂ ಸಭೆ ಸೇರದೆ ನಿಷ್ಕ್ರಿಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಸಮಿತಿಯನ್ನು ಕ್ರಿಯಾಶೀಲನೆಗೊಳಿಸುವ ದೃಷ್ಟಿಯಿಂದ ಹಾಲಿ ಸಮಿತಿಯನ್ನು ವಜಾಮಾಡಿ ಹೊಸ ಸಮಿತಿಯೊಂದನ್ನು ರಚನೆ ಮಾಡಬಾರದೇಕೆ ?

ಶ್ರೀ. ಎ. ಲಕ್ಷ್ಮೀಸಾಗರ್(ನಗರಾಭಿವೃದ್ಧಿ, ಕಾನೂನು ಸಚಿವರು).—

ಅ) ನಿಜ

ಆ) ೧೦ ತಿಂಗಳಾಗಿದೆ. ಸಮಿತಿಯ ಸದಸ್ಯರು

೧) ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ), ಅಧ್ಯಕ್ಷರು

೨) ಶ್ರೀ ಕೆ. ಸಿ. ಭಟ್ಟ, ವ್ಯವಸ್ಥಾಪಕ
ನಿರ್ದೇಶಕ (ಉತ್ಪಾದನೆ)
ಕುದುರೆಮುಖ ಐರನ್ ಕಂಪನಿ
ಕುದುರೆ ಮುಖ ಸದಸ್ಯರು

೩) ಶ್ರೀ ಕೆ. ರವೀಂದ್ರನಾಥ್
ನಗರಾಡಳಿತ ಅಧಿಕಾರಿ, ಕುದುರೆ ಮುಖ ಐರನ್ ವರ್ಕ್ಸ್
ಕುದುರೆಮುಖ ಸದಸ್ಯರು

ಇ) ಕಾರ್ಮಿಕರಿಗೆ ಪ್ರಾತಿನಿಧ್ಯ ನೀಡಿಲ್ಲ. ಸಮಿತಿ ನಿಷ್ಕ್ರಿಯವಾಗಿಲ್ಲ

ಈ) ಉದ್ಭವಿಸುವುದಿಲ್ಲ.

ಅದು ಡೀಪಂಕ್ಟ್ ಆಗಿಲ್ಲ ನಾನು ಇದನ್ನು ರಿಕಾನ್‌ಸ್ಟಿಟ್ಯೂಟ್ ಮಾಡಲು ತಕ್ಷಣ ಕ್ರಮ ತೆಗೆದು ಕೊಳ್ಳುತ್ತೇನೆ. ಇದಕ್ಕೆ ತಮ್ಮ ಸಹಾಯ ಬೇಕು.

ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಸಚಿವರು ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆಗ ಅವರು ಆದಷ್ಟು ಬೇಗ

ಇದನ್ನು ಮಾಡುವುದಾಗಿ ಹೇಳಿದ್ದಾರೆ. ಮತ್ತು (ಆ) ಪ್ರಶ್ನೆಗೆ ಕಾರ್ಮಿಕರಿಗೆ ಪ್ರಾತಿನಿಧ್ಯ ನೀಡಿಲ್ಲವೆಂದು ಉತ್ತರಕೊಟ್ಟಿದ್ದಾರೆ. ಇದರಿಂದಾಗಿ ಕಾರ್ಮಿಕರನ್ನು ಹೇಳುವವರು ಕೇಳುವವರು ಯಾರೂ ಇಲ್ಲದೇ ಅವರಿಗೆ ಬಹಳ ಅನ್ಯಾಯವಾಗುತ್ತಿದೆ. ಹಿಂದೆ ಈ ಸಮಿತಿಗೆ ಶಾಸಕರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರು. ಆದರೆ ಈಗ ಶಾಸಕರಿಗೆ ಪ್ರಾತಿನಿಧ್ಯ ಇಲ್ಲ. ಕಾರ್ಮಿಕರಿಗೂ ಪ್ರಾತಿನಿಧ್ಯ ಇಲ್ಲ. ಹೀಗಾಗಿ ಆ ಏರಿಯಾದಲ್ಲಿ ಇರುವ ಅಂಗಡಿಗಳಲ್ಲಿ ಇವರಿಗೆ ಹೆರಾಸ್‌ಮೆಂಟ್ ಆಗುತ್ತಿದೆ. ಮಾರ್ಕೆಟ್‌ನಲ್ಲಿ ಒಂದು ರೂಪಾಯಿ ಇರುವ ಪದಾರ್ಥಗಳನ್ನು ಐದು ರೂಪಾಯಿಗಳಿಗೆ ಮಾರುತ್ತಿದ್ದಾರೆ. ಮತ್ತು ಇಲ್ಲಿ ಸಂತೆಯನ್ನು ನಡೆಸಬೇಕು ಎಂಬ ಬೇಡಿಕೆ ಇದೆ. ಅದನ್ನೂ ಕೂಡ ಆದಷ್ಟು ಬೇಗ ಮಾಡಬೇಕು. ಸಚಿವರ ಉತ್ತರದಿಂದ ಈ ಸಮಿತಿಯು ೧೦ ತಿಂಗಳಿನಿಂದ ಸಭೆ ನಡೆಸಿಲ್ಲವೆಂದು ಗೊತ್ತಾಗುತ್ತದೆ. ಸಚಿವರು ಕೊಟ್ಟಿರುವ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ. ಆದಾದರಿಂದ ಈ ಸಮಿತಿಯನ್ನು ಕೂಡಲೇ ವಜಾ ಮಾಡಿ ಹೊಸದಾಗಿ ಸಮಿತಿಯನ್ನು ರಚಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುತ್ತೇನೆ. ಮೂರನೆಯ ಪ್ರಶ್ನೆಗಳಿಗೆ ಉತ್ತರ 'ಉದ್ಭವಿಸುವುದಿಲ್ಲವೆಂದು' ಹೇಳಿದ್ದಾರೆ. ಈ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ. ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಮೂರು ಪ್ರಶ್ನೆಗೆ ಒಂದೇ ಉತ್ತರ ಏನೆಂದರೆ ಮಾನ್ಯ ಸದಸ್ಯರು ನನಗೆ ಸ್ವಲ್ಪ ಸಹಾಯ ಮಾಡಿದರೆ ನಾನು ಇದನ್ನು ಪುನರ್ ರಚನೆ ಮಾಡುತ್ತೇನೆ.

ಕೇಂದ್ರ ಸರ್ಕಾರವು ಡೀಸಲ್ ಬೆಲೆ ಏರಿಸಿರುವ ಬಗ್ಗೆ

೧೯೫೫. ಶ್ರೀ ಹೆಗ್ಡೆ ಅಜ್ಜಿಬಾಳ.—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರವು ಇತ್ತೀಚಿನ ಡೀಸಲ್ ಮತ್ತು ಪೆಟ್ರೋಲ್ ಬೆಲೆ ಏರಿಸಿದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೇಲೆ ಪರಿಣಾಮ ಬೀರುತ್ತದೆಯೇ.

ಆ) ಹಾಗಿದ್ದಲ್ಲಿ. ನಷ್ಟವನ್ನು ಸರಿದೂಗಿಸಲು ಸರ್ಕಾರವು ಬಸ್ ದರವನ್ನು ಹೆಚ್ಚಿಸಲು ಯೋಚಿಸಿದೆಯೇ;

ಇ) ಸಾರಿಗೆ ನಿಗಮವನ್ನು ವಿಭಾಗಗಳಾಗಿ ವಿಂಗಡಿಸಬೇಕೆಂದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಲಾಭದಾಯಕವಾಗಿ ಹಾಗೂ ಸ್ಪರ್ಧಾತ್ಮಕವಾಗಿ ನಡೆಸಲು ಸಾರಿಗೆ ನಿಗಮವನ್ನು ಪ್ರಾದೇಶಿಕವಾಗಿ ವಿಭಾಗಿಸಬಹುದಲ್ಲವೇ?

ಶ್ರೀ ಪಿ. ಜಿ. ಆರ್ ಸಿಂಧ್ಯ (ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).

ಅ) ಹೌದು;

ಆ) ಇಲ್ಲ;

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಈಗಾಗಲೇ ೧೩ ಕಾರ್ಯಾಚರಣೆಯ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಈ) ಸದರಿ ೧೩ ವಿಭಾಗಗಳನ್ನು ೫ ಪ್ರಾದೇಶಿಕ ಪಲಯಂಗಳ ಆಡಳಿತ ವ್ಯಾಪ್ತಿಗೂ ಸಹ ಒಳಪಡಿಸಲಾಗಿದೆ.

ಶ್ರೀ ಜಿ. ಎಸ್. ಅಜ್ಜಿಬಾಳ ಹೆಗಡೆ.—ನಾನು ಪ್ರಶ್ನೆ ಕೇಳಿದ ಉದ್ದೇಶ ಏನೆಂದರೆ ಈಗ ನಮ್ಮ ರಾಜ್ಯದಲ್ಲಿ ಒಂದೇ ರಸ್ತೆ ಸಾರಿಗೆ ಕಾರ್ಪೊರೇಷನ್ ಇದೆ. ಇದನ್ನು ವಿಂಗಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಹಿಂದೆ ತಮಿಳುನಾಡಿನಲ್ಲಿ ಒಂದೇ ನಿಗಮ ಇದ್ದಾಗ ಅದು ನಷ್ಟದಲ್ಲಿ ನಡೆಯುತ್ತಿತ್ತು. ಆದರೆ ಅಲ್ಲಿ ವಿಭಜನೆ ಆದ ಮೇಲೆ ಈಗ ಆ ನಿಗಮ ಲಾಭದಲ್ಲಿ ನಡೆಯುತ್ತಿದೆ. ಅಲ್ಲಿ ಒಂದು ಬಸ್‌ಗೆ ೩ ಕಾರ್ಮಿಕರು ಇದ್ದರೆ ನಮ್ಮ ರಾಜ್ಯದಲ್ಲಿ ಒಂದು ಬಸ್ಸಿಗೆ ೧೦-೧೧ ಜನರು ಇದ್ದಾರೆ. ಆದುದರಿಂದ ಈ ರಸ್ತೆ ಸಾರಿಗೆ ನಿಗಮವನ್ನು ಸರ್ಕಾರದವರು ವಿಂಗಡಿಸುತ್ತಾರೆಯೇ ಎಂದು ಕೇಳಲು ನಾನು ಇಷ್ಟಪಡುತ್ತೇನೆ.